# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **18** |
| ಉತ್ತರಿಸಬೇಕಾದ ದಿನಾಂಕ | : | 09.12.2020 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ವಸತಿ ಇಲಾಖೆಯ ವಿವಿಧ ಯೋಜನೆಗಳಡಿ ಹಂಚಿಕೆ ಮಾಡುವ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳೇನು:<br>ಈ ಯೋಜನೆಗಳಡಿ ಹಾಸನ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಹಂಚಿಕೆಯಾದ ಮನೆಗಳೆಷ್ಟು; ಈ ಮನೆಗಳನ್ನು ಪಡೆದಿರುವ ಫಲಾನುಭವಿಗಳ ವಿವರ ನೀಡುವುದು;(ತಾಲ್ಲೂಕು ಮತ್ತು ಹೋಬಳಿ, ಗ್ರಾಮ, ಫಲಾನುಭವಿಗಳ ಹೆಸರು ಜಾತಿವಾರು) | ವಿವಿಧ ವಸತಿ ಯೋಜನೆಗಳಡಿಯಲ್ಲಿ ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲು ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರಬೇಕಾದ ವಿವರ ಅನುಬಂಧದಲ್ಲಿ ಒದಗಿಸಲಾಗಿದೆ.<br><br>ಹಾಸನ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ 21803 ಮನೆಗಳನ್ನು ಹಂಚಿಕೆ ಮಾಡಲಾಗಿದೆ. ಈ ಮನೆಗಳನ್ನು ಪಡೆದ ಫಲಾನುಭವಿಗಳ ತಾಲ್ಲೂಕು ಹಾಗೂ ಗ್ರಾಮವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| (ಆ) | ಹಂಚಿಕೆಯಾಗಿರುವ ಮನೆಗಳಿಗೆ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಖರ್ಚಾಗಿರುವ ಅನುದಾನವೆಷ್ಟು; ಮಂಜೂರಾಗದೇ ಬಾಕಿ ಉಳಿದಿರುವ ಅನುದಾನವೆಷ್ಟು; ಫಲಾನುಭವಿವಾರು ವಿವರ ನೀಡುವುದು; (ತಾಲ್ಲೂಕು ಹೋಬಳಿ, ಗ್ರಾಮ,ಫಲಾನುಭವಿ ಹೆಸರು ಮತ್ತು ಜಾತಿ) | ವಸತಿ ಇಲಾಖೆಯು ಪ್ರತಿ ವರ್ಷ ಆಯವ್ಯಯದಲ್ಲಿ ಜಿಲ್ಲಾವಾರು ಅಥವಾ ವಿಧಾನ ಸಭಾ ಕ್ಷೇತ್ರವಾರು ಅನುದಾನವನ್ನು ಒದಗಿಸದೇ ಒಟ್ಟಾರೆಯಾದ ಯೋಜನಾವಾರು ಅನುದಾನವನ್ನು ಒದಗಿಸಿ ಬಿಡುಗಡೆ ಮಾಡುತ್ತಿದ್ದು, ಸದರಿ ಮೊತ್ತವನ್ನು ಪ್ರಗತಿಗನುಗುಣವಾಗಿ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.<br><br>ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಗೆ ಹಂಚಿಕೆಯಾದ ಮನೆಗಳಿಗೆ ದಿನಾಂಕ 30.11.2020ರ ಅಂತ್ಯಕ್ಕೆ ರೂ.135.39ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಯೋಜನಾವಾರು ವಿವರ ಈ ಕೆಳಗಿನಂತಿದೆ: |

| ಯೋಜನೆ | ಬಿಡುಗಡೆ (ರೂ.ಕೋಟಿಗಳಲ್ಲಿ) |
|---|---|
| ಬಸವ ವಸತಿ ಯೋಜನೆ | 104.78 |
| ಡಾ.ಬಿ.ಆರ್ ಅಂಬೇಡ್ಕರ್ ನಿವಾಸ್ ಯೋಜನೆ | 27.29 |
| ಡಿ.ದೇವರಾಜು ಅರಸು ವಸತಿ ಯೋಜನೆ | 0.61 |
| ವಾಜಪೇಯಿ ನಗರ ವಸತಿ ಯೋಜನೆ | 1.93 |
| ಪ್ರಧಾನ ಮಂತ್ರಿ ಆವಾಸ್ ಯೋಜನೆ - ಗ್ರಾ | 0.27 |

| | | |
|---|---|---|
| | | <table><tr><td>ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ</td><td>0.51</td></tr><tr><td>ಒಟ್ಟು</td><td>135.39</td></tr></table><br>ತಾಲ್ಲೂಕು, ಗ್ರಾಮ, ಫಲಾನುಭವಿ ಹೆಸರು ಮತ್ತು ಜಾತಿ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br><br>ಸರ್ಕಾರದ ಆದೇಶದಂತೆ ಪ್ರಗತಿಯಲ್ಲಿರುವ ಮನೆಗಳನ್ನು ಇಂದಿರಾ ಮನೆ ಮೊಬೈಲ್ ಆಪ್ ಮೂಲಕ ಮನೆಗಳ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹಗೊಂಡ ನಂತರ ಸದರಿ ಮನೆಗಳ ಪ್ರಗತಿಯನ್ನು ಮತ್ತೊಮ್ಮೆ Geo ಆಧಾರಿತ Vigil App ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರು ಪರಿಶೀಲಿಸಿ ಅರ್ಹಗೊಂಡ ಮನೆಗಳಿಗೆ ಆಧಾರ್ ಜೋಡನೆಯಾದ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಪ್ರಸ್ತುತ Vigil App ಪರಿಶೀಲನೆಗೊಂಡ ಯಾವುದೇ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಬಾಕಿ ಇರುವುದಿಲ್ಲ. |
| (ಇ) | ಹಾಸನ ಜಿಲ್ಲೆಯಲ್ಲಿರುವ ನಿರ್ವಸತಿಕರ ಸಂಖ್ಯೆ ಎಷ್ಟು; ಈ ನಿರ್ವಸತಿಕರ ಯಾವ ಕಾಲಮಿತಿಯೊಳಗೆ ವಸತಿ ಕಲ್ಪಿಸಲಾಗುವುದು? (ತಾಲ್ಲೂಕು ಹೋಬಳಿ, ಗ್ರಾಮ, ನಿರ್ವಸತಿಕರ ಹೆಸರು ಮತ್ತು ಜಾತಿ ಮಾಹಿತಿಯೊಂದಿಗೆ ವಿವರ ನೀಡುವುದು) | 2018 ರ ವಸತಿ/ನಿವೇಶನ ರಹಿತರ ಸಮೀಕ್ಷೆಯ ಪ್ರಕಾರ ಹಾಸನ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 65557 ವಸತಿ / ನಿವೇಶನ ರಹಿತರಿದ್ದು, ಈ ಪೈಕಿ 57309 ವಸತಿ ರಹಿತರು ಹಾಗೂ 8248 ನಿವೇಶನರಹಿತರು ಕಂಡು ಬಂದಿರುತ್ತಾರೆ.<br><br>ನಗರ ಪ್ರದೇಶದಲ್ಲಿ ಒಟ್ಟು 17711 ವಸತಿ / ನಿವೇಶನ ರಹಿತರಿದ್ದು, ಈ ಪೈಕಿ 5131 ವಸತಿ ರಹಿತರು ಹಾಗೂ 12580 ನಿವೇಶನ ರಹಿತರು ಕಂಡು ಬಂದಿರುತ್ತಾರೆ.<br><br>ಗ್ರಾಮೀಣ ಹಾಗೂ ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ತಾಲ್ಲೂಕುವಾರು /ಗ್ರಾಮ ಜಾತಿವಾರು ವಸತಿ ರಹಿರತ ಮಾಹಿತಿಯನ್ನು ಅನುಬಂಧ-3 ಮತ್ತು 4 ರಲ್ಲಿ ಒದಗಿಸಲಾಗಿದೆ.<br><br>ವಸತಿ ರಹಿತರಿಗೆ ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನಕ್ಕೆ ಅನುಗುಣವಾಗಿ ಎಲ್ಲಾ ವಸತಿ ರಹಿತರಿಗೆ ಆದ್ಯತೆ ಮೇರೆಗೆ ಮನೆಗಳನ್ನು ಮಂಜೂರು ಮಾಡಲಾಗುವುದು. |

ಸಂಖ್ಯೆ :ವಇ 411 ಹೆಚ್ಎ ಎಂ 2020

(ವಿ. ಸೋಮಣ್ಣ)
ವಸತಿ ಸಚಿವರು

## ಅನುಬಂಧ

ವಿವಿಧ ವಸತಿ ಯೋಜನೆಗಳಡಿಯಲ್ಲಿ ವಸತಿ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲು ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರಬೇಕಾದ ವಿವರ ಕೆಳಕಂಡಂತಿದೆ.

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.
- 2018ನೇ ಸಾಲಿನ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಗುರುತಿಸಲಾದ ವಸತಿ ರಹಿತರ ಸಮೀಕ್ಷೆಯ ಪಟ್ಟಿಯಲ್ಲಿದ್ದು, ಸ್ವಂತ ನಿವೇಶನ ಹೊಂದಿರಬೇಕು.
- ಅರ್ಜಿದಾರರ ಕುಂಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದಲ್ಲಿರೂ. 32000/- ಕ್ಕಿಂತ ಕಡಿಮೆ ಇರಬೇಕು ನಗರ ಪ್ರದೇಶದಲ್ಲಿರೂ.87,600/-ರ ಒಳಗಿರಬೇಕು.
- ಅರ್ಜಿದಾರರ ಕುಟುಂಬವು ವಸತಿರಹಿತರಾಗಿದ್ದು, ಅರ್ಜಿದಾರರು ಅಥವಾ ಕುಂಟುಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)
- ಬೇರೆ ಯಾವುದೇ ಯೋಜನೆ/ ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.